ಆ) ಶವಗಳನ್ನು ಸಾಗಿಸಲು ನಗರ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಗಳು ಶವ ವಾಹನಗಳನ್ನು ಇಡುತ್ತಿದ್ದು, ಇವುಗಳನ್ನು ಶವ ಸಾಗಿಸಲು ಉಪಯೋಗಿಸುತ್ತಿದ್ದಾರೆ ಗ್ರಾಮೀಣ ಪ್ರದೇಶಗಳಲ್ಲಿ ಈ ಸೌಲಭ್ಯವಿಲ್ಲ.

ಇ) ವೈದ್ಯಕೀಯ ಮಾನದಂಡಗಳಿಗೆ ಹಾಗೂ ನೀತಿ ಸಂಹಿತೆಗೆ ಇದು ವ್ಯತಿರಿಕ್ತವಾಗಿರುವುದರಿಂದ ಸದ್ಯಕ್ಕೆ ಈ ಧೋರಣೆ ಬದಲಾವಣೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

2486(3373) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):–ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅಕ್ರಮ ಜಮೀನು ಸಕ್ರಮ ಕೋರಿ ಅರ್ಜಿ ಸಲ್ಲಿಸಿರುವ ಪ್ರಕರಣಗಳು ಇತ್ಯರ್ಥವಾಗದೇ ಇರುವುದರಿಂದ ರಾಜೀವ್ ಗಾಂಧಿ ಆಶ್ರಯ ಗೋಲ್ಡನ್ ಜುಬಿಲಿ ಗ್ರಾಮೀಣ ವಸತಿ ಸಾಲ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಿ ಆಯ್ಕೆಯಾದವರ ಹೆಸರಿನಲ್ಲಿ ಜಮೀನು ಇರಬೇಕೆಂದು ಹೊರಡಿಸಿದ ಸುತ್ತೋಲೆ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಈ ಸುತ್ತೋಲೆಯಿಂದ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗದೇ ಇರುವುದು ನಿಜವೇ;

ಇ) ತಾಲ್ಲೂಕು ಪಂಚಾಯತ್‌ಗಳಿಗೆ ನಿಗದಿಪಡಿಸಿದ ಗುರಿ ಸಾಧಿಸಲು ಸಾಧ್ಯವಾಗದೇ ಇರುವುದರಿಂದ ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳಲು ಉದ್ದೇಶಿಸಿದೆ;

ಈ) ಇಂದಿರಾ ಆವಾಜ್ ಮತ್ತು ಅಂಬೇಡ್ಕರ್, ಐ.ಟಿ.ಡಿ.ಪಿ. ಮನೆಗಳಿಗೆ ಫಲಾನುಭವಿಗಳ ಹೆಸರಿನಲ್ಲಿ ಜಮೀನು ಇರಬೇಕೆಂದು ನಿಯಮ ಇಲ್ಲದಿರುವುದು ನಿಜವೇ;

ಉ) ಹೀಗಿರುವಾಗ ರಾಜೀವ್ ಗಾಂಧಿ ಆಶ್ರಯ ಯೋಜನೆಗಳಿಗೆ ಮಾತ್ರ ಜಮೀನು ಇರಬೇಕೆಂಬುದರ ಉದ್ದೇಶವೇನು;

ಊ) ಹಾಗಿದ್ದರೆ, ಈ ನಿಯಮ ಸಡಿಲಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮನೆ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಅಂಜನಮೂರ್ತಿ (ವಸತಿ ಸಚಿವರು):

ಅ) ಗೋಲ್ಡನ್ ಜುಬಿಲಿ ಗ್ರಾಮೀಣ ವಸತಿ ಸಾಲ ಯೋಜನೆಯು ಬ್ಯಾಂಕರ್‌ಗಳ ಯೋಜನೆಯಾಗಿರುವುದರಿಂದ ಈ ಬಗ್ಗೆ ಯಾವುದೇ ಸುತ್ತೋಲೆ ಹೊರಡಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬ್ಯಾಂಕರ್‌ಗಳ ಯೋಜನೆಯಾಗಿರುವುದರಿಂದ ಯಾವುದೇ ಗುರಿ ನೀಡಿರುವುದಿಲ್ಲ.

ಈ) ಈ ಯೋಜನೆಯಡಿಯಲ್ಲಿ ಸಹ ಫಲಾನುಭವಿಗಳ ಹೆಸರಿನಲ್ಲಿ ನಿಯಮಾನುಸಾರ ನಿವೇಶನ ಇರಬೇಕಾದ್ದು ಅತ್ಯವಶ್ಯಕವಾಗಿದೆ.

ಊ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಯೋಜನೆಗಳಡಿಯಲ್ಲಿ ಫಲಾನುಭವಿಗಳು ಕಡ್ಡಾಯವಾಗಿ ತಮ್ಮ ಹೆಸರಿನಲ್ಲಿ ನಿವೇಶನ ಹೊಂದಿರಬೇಕು. ಈ ನಿವೇಶನವು ಅವರ ಸ್ವಂತದ್ದೇ ಆಗಿರಬಹುದು, ಅಥವಾ ಸರ್ಕಾರ ನೀಡಿರುವ ಉಚಿತ ನಿವೇಶನವೇ ಆಗಿರಬಹುದು.

ಋ) ಫಲಾನುಭವಿಗಳ ಹೆಸರಿನಲ್ಲಿ ನಿಯಮಾನುಸಾರ ನಿವೇಶನ ಇದ್ದಲ್ಲಿ ಮಾತ್ರ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಿರುವ ನಿಯಮವನ್ನು ಸಡಿಲಿಸುವ ಅವಶ್ಯಕತೆ ಉದ್ಭವಿಸುವುದಿಲ್ಲ.

2487(3374) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):–ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಲ್ಡನ್ ಜುಬಿಲಿ ಗ್ರಾಮೀಣ ವಸತಿ ಸಾಲ ಯೋಜನೆಯಡಿಯಲ್ಲಿ ವಸತಿ ರಹಿತರು ವಸತಿ ನಿರ್ಮಿಸಿಕೊಳ್ಳಲು ಮುಂದೆ ಬರುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ಯೋಜನೆಯ ನಿಯಮಗಳನ್ನು ಪರಿಷ್ಕರಿಸಿ ಆಶ್ರಯ ಸಮಿತಿಗಳಿಗೆ ಮನೆ ಮಂಜೂರ ಮಾಡುವ ಅಧಿಕಾರ ಕೊಡಲು ಸರ್ಕಾರ ಇಚ್ಛಿಸಿದೆಯೇ:

ಇ) ಗ್ರಾಮ ಸಭೆಗಳಲ್ಲಿ ಅರ್ಜಿಗಳನ್ನು ನೊಂದಾಯಿಸಿಕೊಳ್ಳದೇ ಇರುವುದರಿಂದ ಅರ್ಹ ಫಲಾನುಭವಿಗಳು ಯೋಜನೆಯಿಂದ ವಂಚಿತರಾಗುವುದು ನಿಜವಲ್ಲವೇ:

ಈ) ಹಾಗಿದ್ದರೆ, ಆಶ್ರಯ ಸಮಿತಿಯವರು ಉನ್ನತ ಅಧಿಕಾರಿಗಳೊಂದಿಗೆ ಗ್ರಾಮಗಳಿಗೆ ತೆರಳಿ ಗ್ರಾಮವಾರು ಸರ್ವೆ ನಡೆಸಿ ಅರ್ಹ ಫಲಾನುಭವಿಗಳನ್ನು ಗುರುತಿಸಲು ಸರ್ಕಾರ ಕ್ರಮ ಜರುಗಿಸುವುದೇ;

ಉ) ವಸತಿ ರಹಿತರಿಗೆ ಜಮೀನು ಕಡ್ಡಾಯವಾಗಿ ಅವರ ಹೆಸರಿನಲ್ಲಿ ಇರಬೇಕೆಂಬ ನಿಯಮವನ್ನು ಸಡಿಲಿಸಿ, ಆಶ್ರಯ ಸಮಿತಿಯವರು ಗುರುತಿಸಿರುವ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಅಂಜನಮೂರ್ತಿ (ವಸತಿ ಸಚಿವರು):

ಅ) ಇಲ್ಲ.

ಆ) ಈ ಯೋಜನೆಯು ಬ್ಯಾಂಕರ್‌ಗಳ ಯೋಜನೆಯಾಗಿರುವುದರಿಂದ ಇದನ್ನು ಪರಿಷ್ಕರಿಸುವ ಅಧಿಕಾರ ಸರ್ಕಾರಕ್ಕೆ ಇರುವುದಿಲ್ಲ.

ಇ) ಇಲ್ಲ.

ಈ) ಈಗಾಗಲೇ ಪ್ರತಿ ಗ್ರಾಮ ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಸರ್ವೆ ನಡೆಸಿ, ಅರ್ಹ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ, ಈ ಪಟ್ಟಿಗೆ ಗ್ರಾಮ ಪಂಚಾಯಿತಿಯ ಠರಾವು ಸಹ ಆಗಿರುತ್ತದೆ. ಆದರೂ, ಅರ್ಹ ಫಲಾನುಭವಿಗಳು ಪಟ್ಟಿಯಿಂದ ಬಿಟ್ಟು ಹೋಗಿದ್ದಲ್ಲಿ ಅಂತಹವರನ್ನು ಗ್ರಾಮ ಸಭೆಗಳ ಮೂಲಕ ಸೇರಿಸಲು ಅವಕಾಶವಿರುತ್ತದೆ.